ಗಜವದನ ಬೇಡುವೆ ಗೌರಿತನಯ ॥ ಪ ॥

ತ್ರಿಜಗವಂದಿತನೆ ಸುಜನರ ಪೊರೆವನೆ ॥ ಅ ॥

ಪಾಶಾಂಕುಶಧರ ಪರಮಪವಿತ್ರ ।
ಮೂಷಿಕವಾಹನ ಮುನಿಜನ ಪ್ರೇಮ ॥ ೧ ॥

ಮೋದದಿ ನಿನ್ನಯ ಪಾದವ ತೋರೋ ।
ಸಾಧುವಂದಿತನೆ ಆದರದಿಂದಲಿ ॥ ೨ ॥

ಸರಸಿಜನಾಭ ಶ್ರೀ ಪುರಂದರವಿಠಲನ ।
ನಿರುತ ನೆನೆಯುವಂತೆ ದಯಮಾಡೋ ॥ ೩ ॥